ವೃತ್ತಿಯಲ್ಲಿ ವಕೀಲನಾದರೂ, ಸಿನಿಮಾರಂಗದಲ್ಲಿ ಹೆಸರು ಮಾಡಬೇಕೆಂಬ ಹಂಬಲ ಹೊತ್ತಿರುವ ವಿಕಾಶ್ ಉತ್ತಯ್ಯ, ಕೊಡಗಿನ ಹುಡುಗ. ಬೆಳ್ಳಿತೆರೆಯಲ್ಲಿ ಕನಸು ಅರಸುತ್ತಿರುವ ವಿಕಾಶ್‌ಗೆ ತಮ್ಮನ್ನು ನಿರೂಪಿಸಿಕೊಳ್ಳುವಂಥ ಅವಕಾಶದ ಅಭಿಲಾಷೆ.

■ ಸುಮಲತಾ ಎನ್

# ವೃತ್ತಿ ವಕೀಲಿಕೆ, ಸಿನಿಮಾ ಕನವರಿಕೆ



ಸಿನಿಮಾಗಳನ್ನು ನೋಡುತ್ತಾ ನೋಡುತ್ತಾ ಅದರೆಡೆಗೆ ಒಲವು ಬೆಳೆಸಿಕೊಂಡ ವಿಕಾಶ್ ಉತ್ತಯ್ಯ, ಮೂಲತಃ ವಕೀಲ. ವಕೀಲಿಕೆಯಲ್ಲಿದ್ದರೂ ಸಿನಿಮಾರಂಗ ಎಂದರೆ ಒಂದು ಕೈ ಹೆಚ್ಚೇ ಆಕರ್ಷಣೆ, ಪ್ರೀತಿ. ಇದೇ ಪ್ರೀತಿ ಅವರನ್ನು ಬಣ್ಣದ ಲೋಕದೆಡೆಗೆ ವಾಲುವಂತೆ ಮಾಡಿದೆ.

ಮಡಿಕೇರಿಯ ವಿಕಾಶ್ ಅವರಿಗೆ ಮೊದಲಿನಿಂದಲೂ ಸಿನಿಮಾ ನೋಡುವ ಗೀಳು. ಭಾಷೆ ಯಾವುದಿದ್ದರೂ ಸರಿ, ಒಳ್ಳೊಳ್ಳೆಯ ಸಿನಿಮಾಗಳನ್ನು ಹೆಚ್ಚೆಚ್ಚು ನೋಡಬೇಕೆಂಬ ಆಸೆ. ಹೀಗೆ ಸಿನಿಮಾಗಳನ್ನು ನೋಡುತ್ತಲೇ ಅವರನ್ನೂ ಬಣ್ಣದ ಕನಸುಗಳು ಆವರಿಸಿದ್ದವು.

‘ನನಗೆ ಚಿಕ್ಕ ವಯಸ್ಸಿನಿಂದಲೇ ಸಿನಿಮಾ ನೋಡುವ ಅಭ್ಯಾಸ ಇತ್ತು. ಯಾವುದೇ ಭಾಷೆಯ ಸಿನಿಮಾ ಆದರೂ ನೋಡುತ್ತಿದ್ದೆ. ಕುತೂಹಲದಿಂದ ಕಥೆ, ಪಾತ್ರಗಳನ್ನು ಕಣ್ತುಂಬಿಕೊಳ್ಳುತ್ತಿದ್ದೆ. ಬಹುಶಃ ಅದೇ ನನ್ನ ಮೇಲೆ ಪ್ರಭಾವ ಬೀರಿರಬಹುದು. ಸಿನಿಮಾದಲ್ಲಿ ನಟರನ್ನು ನೋಡುತ್ತಾ, ನಾನೂ ಹೀಗೆ ಯಾಕಾಗಬಾರದು ಎಂದು ಮನಸ್ಸಲ್ಲೇ ಪ್ರಶ್ನಿಸಿಕೊಳ್ಳುತ್ತಿದ್ದೆ. ಜೊತೆಗೆ ಸಾಮಾಜಿಕ ಜಾಲತಾಣದಲ್ಲಿ ಇನ್‌ಫ್ಲುಯೆನ್ಸರ್ ಆಗಿದ್ದೆ. ಇನ್‌ಸ್ಟಾಗ್ರಾಂನಲ್ಲಿ ಮೋಟಿವೇಷನ್, ಫನ್ನಿ ವಿಡಿಯೊಗಳಿಂದ ಮನರಂಜನೆ ನೀಡುತ್ತಿದ್ದೆ. ಆಗ ಹಲವರು, ನೀವ್ಯಾಕೆ ನಟನೆಗೆ ಹೋಗಬಾರದು ಎಂದು ಪ್ರಶ್ನಿಸುತ್ತಿದ್ದರು. ಆಗೆಲ್ಲಾ ನನ್ನೊಳಗಿನ ನಟನೆಯ ಹಂಬಲ ಇನ್ನಷ್ಟು ಗಟ್ಟಿಯಾಗುತ್ತಿತ್ತು. ಕೊಡಗಿನಲ್ಲಿ ಸಿನಿಮಾ ಆಸಕ್ತಿಯ ಜನರು ತುಂಬಾ ಕಡಿಮೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿಂದ ಸಿನಿಮಾ ಕ್ಷೇತ್ರಕ್ಕೆ ಬರುವವರೂ ಕಡಿಮೆ. ಕ್ರೀಡೆ, ಸೇನೆ ಕಡೆಗೆ ಹೆಚ್ಚು ಒಲವು. ಸಿನಿಮಾವನ್ನು ದೊಡ್ಡ ಕೆರಿಯರ್ ಆಗಿ ಪರಿಗಣಿಸುತ್ತಿರಲಿಲ್ಲ. ಆದರೆ ನನಗೇಕೋ ಸಿನಿಮಾ ಎಂದರೆ ಪ್ರೀತಿ’ ಎಂದು ವಿವರಿಸುತ್ತಾರೆ ವಿಕಾಶ್.

ಪಿಯುಸಿ ಆಗುತ್ತಲೇ ನಾಟಕ ಶಾಲೆಗೆ ಸೇರಬೇಕೆಂಬ ಆಲೋಚನೆಯಿದ್ದರೂ ಅದು ಫಲಿಸಲಿಲ್ಲ. ಮನೆಯವರ ಅಭಿಲಾಷೆಯಂತೆ, ಮೊದಲು ಶಿಕ್ಷಣ ಪೂರೈಸಬೇಕೆಂದು ಸಿನಿಮಾ ಹಂಬಲವನ್ನು ಮನದಲ್ಲೇ ತುಂಬಿಕೊಂಡು ಮಂಗಳೂರಿಗೆ ಬಂದ ವಿಕಾಶ್, ಕಾನೂನು ಪದವಿ ಪಡೆದರು. ಎಲ್‌ಎಲ್‌ಎಂ ಮಾಡಲು ಬೆಂಗಳೂರಿನ ಹಾದಿ ಹಿಡಿದ ನಂತರ ಅವರಲ್ಲಿ ಸುಪ್ತವಾಗಿದ್ದ ಸಿನಿಮಾ ಕನಸು ಮತ್ತೆ ಚಿಗುರೊಡೆದಿತ್ತು.

‘ಸಾಮಾಜಿಕ ಜೀವನಕ್ಕೆ ತುಂಬಾ ಹತ್ತಿರವಾದ ಕ್ಷೇತ್ರ ಎಂದು ಕಾನೂನು ಪದವಿ ಆರಿಸಿಕೊಂಡಿದ್ದೆ. ವಕೀಲನಾಗಬೇಕೆಂಬುದು ನನ್ನ ಹಂಬಲವೂ ಆಗಿತ್ತು. ಹೀಗಾಗಿ ಎಲ್‌ಎಲ್‌ಎಂ ಮುಗಿಸಿದ ನಂತರ ವಕೀಲನಾದೆ. ಇದರ ಜೊತೆಜೊತೆಗೆ ಸಿನಿಮಾಗೆಂದು ಮನಸ್ಸಲ್ಲಿ ತಯಾರಿ ನಡೆಸುತ್ತಲೇ ಇದ್ದೆ. ಅಚಾನಕ್ಕಾಗಿ ಕಿರುತೆರೆಯಲ್ಲಿ ಅವಕಾಶವೊಂದು ಹುಡುಕಿಕೊಂಡು ಬಂತು. ‘ಶಾಂತಂ ಪಾಪಂ’ ಟೀವಿ ಕಾರ್ಯಕ್ರಮ ಆಗಷ್ಟೆ ಆರಂಭವಾಗಿತ್ತು. ಮೊದಲ ಎರಡು ಎಪಿಸೋಡ್‌ಗಳಲ್ಲಿ ನಟಿಸುವ ಅವಕಾಶ ನನಗೆ ಸಿಕ್ಕಿತು. ಸ್ಕ್ರೀನ್‌ನಲ್ಲಿ ಹೇಗೆ ಕಾಣಿಸುತ್ತೇನೆಂದು ನನ್ನನ್ನು ನಾನು ನೋಡಿಕೊಳ್ಳಬೇಕಿತ್ತು. ಹೀಗಾಗಿ ಆ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡೆ. ಆನಂತರ ಸ್ಕ್ರೀನ್ ಮೇಲೆ ನಾನು ಚೆನ್ನಾಗಿ ಕಾಣಿಸುತ್ತೇನೆ, ನಟಿಸುತ್ತೇನೆ ಎಂದು ನನಗೆ ನನ್ನ ಮೇಲೆ ಸಂಪೂರ್ಣ ಆತ್ಮವಿಶ್ವಾಸ ಬಂತು...’ ಎಂದು, ಅವರು ನಟನೆಗೆ ಕಾಲಿಟ್ಟ ಸಂದರ್ಭವನ್ನು ಮೆಲುಕು ಹಾಕಿದರು.

ಪುಟ್ಟ ಕಾರ್ಯಕ್ರಮಕ್ಕೆ ಸಿಕ್ಕ ಪ್ರಶಂಸೆ ವಿಕಾಶ್